ಅ) 2010ರ ಜೂನ್ 3 ಮತ್ತು 4ರಂದು ನಡೆಸಲಾದ ವಿಶ್ವ ಹೂಡಿಕೆದಾರರ ಸಮ್ಮೇಳನದಲ್ಲಿ ಉದ್ದಿಮೆದಾರರೊಂದಿಗೆ ಮಾಡಿಕೊಂಡ ಒಪ್ಪಂದದಂತೆ ಎಷ್ಟು ಯೋಜನೆಗಳಿಗೆ ಮಂಜೂರಾತಿ ನೀಡಲಾಗಿದೆ;

ಆ) ಎಷ್ಟು ಯೋಜನೆಗಳು ಕಾರ್ಯಗತವಾಗಿವೆ;

ಇ) ಸರ್ಕಾರವು ಉದ್ದಿಮೆದಾರರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದೇ; ಹಾಗೂ ಎಷ್ಟು ಮೊತ್ತವನ್ನು ಯಾವ ಉದ್ದೇಶಗಳಿಗಾಗಿ ವ್ಯಯಿಸಿದೆ?

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) 2010ರ ಜೂನ್ 3 ಮತ್ತು 4ರಂದು ನಡೆಸಲಾದ ವಿಶ್ವ ಹೂಡಿಕೆದಾರರ ಸಮ್ಮೇಳನದಲ್ಲಿ ಉದ್ದಿಮೆದಾರರೊಂದಿಗೆ ಮಾಡಿಕೊಂಡ ಒಪ್ಪಂದದಂತೆ ಒಟ್ಟು 389 ಯೋಜನೆಗಳಿಗೆ ಮಂಜೂರಾತಿ ನೀಡಲಾಗಿದೆ.

ಆ) ಈವರೆವಿಗೆ ಮೇಲೆ ಕಾಣಿಸಿದ ಒಪ್ಪಂದ ಮಾಡಿಕೊಂಡಿರುವ ಯೋಜನೆಗಳಲ್ಲಿ 14 ಯೋಜನೆಗಳು ಕಾರ್ಯಗತವಾಗಿದ್ದು, 201 ಯೋಜನೆಗಳು ವಿವಿಧ ಹಂತಗಳಲ್ಲಿ ಕಾರ್ಯಗತಗೊಳ್ಳುತ್ತಿವೆ.

ಇ) ಹೌದು. ಉದ್ದಿಮೆದಾರರಿಗೆ ಬೇಕಾದ ಭೂಮಿ, ನೀರು, ವಿದ್ಯುತ್ ಇತ್ಯಾದಿ ಮೂಲ ಸೌಕರ್ಯಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಆಯಾ ಇಲಾಖೆಗಳ ನಿಯಮಗಳನ್ವಯ ಶುಲ್ಕ ಪಡೆದು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ನೇಕಾರರಿಗಾಗಿ ರಚಿಸಲಾದ ಮನೆಗಳು

105(162) ಶ್ರೀ ವಸಂತಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೈಮಗ್ಗ ನೇಯುವವರಿಗಾಗಿ ಮನೆ ನಿರ್ಮಿಸಿಕೊಂಡಿರುವ ಯೋಜನೆಯಡಿ ಎಷ್ಟು ಮಂದಿಯನ್ನು ಫಲಾನುಭವಿಗಳನ್ನಾಗಿ ಗುರುತಿಸಲಾಗಿದೆ;

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು);

ಇ) ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ಎಷ್ಟು ಜನರಿಗೆ ಮನೆ ಕಟ್ಟಿಕೊಳ್ಳಲು ಅನುದಾನ ಒದಗಿಸಲಾಗಿದೆ?

ಶ್ರೀ ಗೋವಿಂದ ಎಂ. ಕಾರಜೋಳ (ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು)

ಅ) ಹಿಂದಿನ ಎರಡು ವರ್ಷಗಳಲ್ಲಿ ಒಟ್ಟು 3,353 ಫಲಾನುಭವಿಗಳನ್ನಾಗಿ ಗುರುತಿಸಿದೆ.

1) 2008–09ನೇ ಸಾಲಿಗೆ 1066

2) 2009–10ನೇ ಸಾಲಿಗೆ 2287

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2010–11ನೇ ಸಾಲಿಗೆ ಗುರುತಿಸಿರುವ ತಾಲ್ಲೂಕುವಾರು ಫಲಾನುಭವಿಗಳ ಸಂಖ್ಯೆ ಇಂತಿದೆ.

1) ಮಂಗಳೂರು : 56

2) ಬೆಳ್ತಂಗಡಿ : 01

3) ಬಂಟ್ವಾಳ : 03

4) ಪುತ್ತೂರು : 0

5) ಸುಳ್ಯ : 0

ಒಟ್ಟು : 60

ಇ) 2008–09 – 1066 ಜನರಿಗೆ

2009–10 – 2287 ಜನರಿಗೆ

ಒಟ್ಟು – 3353

ಕೈಲಾಸ ಮಾನಸ ಸರೋವರಯಾತ್ರೆಗೆ ಸಹಾಯಧನ

106(163) ವಸಂತಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಉನ್ನತ ಶಿಕ್ಷಣ, ಯೋಜನೆ, ಸಾಂಖ್ಯಿಕ, ಮುಜರಾಯಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದಿಂದ ಕೈಲಾಸ ಮಾನಸ ಸರೋವರ ಯಾತ್ರೆ ಕೈಗೊಳ್ಳುವ ಯಾತ್ರಿಗಳಿಗೆ ಸರಕಾರದ ವತಿಯಿಂದ ಎಷ್ಟು ಸಹಾಯಧನ ನೀಡಲಾಗುತ್ತಿದೆ;